**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 51/2017</u>**

ದಿನಾಂಕಃ 01.10.2018
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 8 ಪ್ರಾಸಾ - 9

| | | |
|---|---|---|
| ಹೆಸರು | ಃ | ಗಿರೀಶ್ |
| ತಂದೆಯ/ಗಂಡನ ಹೆಸರು | ಃ | ಶಿವಸ್ವಾಮಿ |
| ವಯಸ್ಸು | ಃ | 27 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸಸ್ಥಳ | ಃ | ಚಿಕ್ಕಸೂಲಿಕೆರೆ. |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 31.01.2017 ರಂದು ನ್ಯಾಯಾಲಯದ ಮುಂದಿವರು ಆರೋಪಿ-2 ಸೈಯದ್ ಮುಜಾಹಿದ್ ಬಾಬ ಆರೋಪಿ-3 ಸೈಯದ್ ಮೌಲಾ ಮತ್ತು ಆರೋಪಿ-4 ಅಬ್ದುಲ್ ಸಲಾಂ ಸಾಬರ್ ರವರನ್ನು ನಾನು ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನೋಡಿದ್ದೇನೆ.

2. ನಮ್ಮ ಊರಿನ ಪಕ್ಕದ ಕೆಂಪವಡೇರಹಳ್ಳಿಯ ಪ್ರೇಮಾರವರ ಮನೆಯಲ್ಲಿ ದರೋಡೆ ಮಾಡಿದವರು ಎಂದು ಆ 3 ಜನ ಆರೋಪಿಗಳನ್ನು ಪೊಲೀಸರು ನನಗೆ ತೋರಿಸಿದ್ದಾರೆ. ಅವರ ಪೈಕಿ 2 ನೇ ಆರೋಪಿಯಿಂದ ರೂ.4,000/-, 20 ಚಿನ್ನದ ಗುಂಡುಗಳು, ಎರಡು ಲಕ್ಷ್ಮೀ ಕಾಸುಗಳು, 2 ತಾಳಿ, ಮತ್ತು ಕಾಸುಗಳನ್ನು ಅಮಾನತು ಪಡಿಸಿಕೊಂಡರು. 4 ನೇ ಆರೋಪಿಯಿಂದ ರೂ.3,000/-, ಒಂದು

ಸ್ಕೂಟರ್, ಮತ್ತು ಇನ್ನೊಬ್ಬ ಆರೋಪಿಯಿಂದ ರೂ.2,000/- ವನ್ನು ಅಮಾನತು ಪಡಿಸಿಕೊಂಡರು.

3. ಪೊಲೀಸರು ಠಾಣೆಯಲ್ಲಿ ಬೆಳಿಗ್ಗೆ 10.45 ರಿಂದ 12 ಗಂಟೆಯ ಸಮಯದಲ್ಲಿ ಪಂಚನಾಮೆಯನ್ನು ಮಾಡಿ ಈಗ ನೋಡಿದ ದಾಖಲೆಗೆ ನನ್ನ ರುಜು ಪಡೆದುಕೊಂಡಿದ್ದಾರೆ. ಸದರಿ ದಾಖಲೆಯನ್ನು ಈಗಾಗಲೇ ನಿಶಾನೆ ಪಿ 10 ಎಂದು ನಿಶಾನೆ ಮಾಡಲಾಗಿದೆ. ಸಾಕ್ಷಿಯ ರುಜುವನ್ನು ನಿಶಾನೆ ಪಿ 10(ಬಿ) ಎಂದು ನಿಶಾನೆ ಮಾಡಲಾಯಿತು.

4. ಅದೇ ರೀತಿ ಪೊಲೀಸರು ಒಂದು ಚಾಕು ಮತ್ತು ಎರಡು ಮೊಬೈಲ್‌ಗಳನ್ನು ಅಮಾನತುಪಡಿಸಿಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಪೊಲೀಸರು ಅಮಾನತು ಪಡಿಸಿಕೊಂಡ ಎರಡು ಚಿನ್ನದ ಲಕ್ಷ್ಮೀ ಕಾಸುಗಳು, ಎರಡು ಚಿನ್ನದ ತಾಳಿಗಳು, 20 ಚಿನ್ನದ ಸಣ್ಣ ಗುಂಡುಗಳನ್ನು ಈಗಾಗಲೇ ಮುದ್ದೆಮಾಲು 11 ರಿಂದ 14 ಮತ್ತು 15 ಎಂದು ನಿಶಾನೆ ಮಾಡಲಾಗಿದೆ.

5. ಸದರಿ ಎರಡು ಮೊಬೈಲ್‌ಗಳನ್ನು ಈಗ ನೋಡಿದೆ. ಸದರಿ ಎರಡು ಮೊಬೈಲ್‌ಗಳನ್ನು ಅನುಕ್ರಮವಾಗಿ ಮುದ್ದೆಮಾಲು 18 ಮತ್ತು ಮುದ್ದೆಮಾಲು 19 ಎಂದು ನಿಶಾನೆ ಮಾಡಲಾಯಿತು.

6. ಪೊಲೀಸರು ಅಮಾನತು ಪಡಿಸಿಕೊಂಡ ಲಕ್ಷ್ಮೀ ಕಾಸು ಮತ್ತು ಚಿನ್ನದ ತಾಳಿಗಳು ನಿಶಾನೆ ಪಿ 8 ಮತ್ತು 9 ಫೋಟೋಗಳಲ್ಲಿ ಕಂಡುಬರುತ್ತವೆ.

7. ಆ ರೀತಿ ಪೊಲೀಸರು ಅನುಕ್ರಮವಾಗಿ ಅಮಾನತುಪಡಿಸಿಕೊಂಡ ರೂ.4,000/-, ರೂ.3,000 ಮತ್ತು ರೂ.2,000 ವನ್ನು ನೋಡಿದರೆ ಗುರುತಿಸುತ್ತೇನೆ. ಆ ನೋಟುಗಳು ನಿಶಾನೆ ಪಿ 9 ಫೋಟೋದಲ್ಲಿ ಕಂಡುಬರುತ್ತವೆ.

8. ಎರಡು ಮೊಬೈಲ್‌ಗಳೂ ಕೂಡ ಒಬ್ಬನೇ ಆರೋಪಿಯ ವಶದಲ್ಲಿದ್ದವು.

**<u>ಪಾಟೀ ಸವಾಲುಃ</u> ಶ್ರೀ.ಹೆಚ್.ಎಸ್.ಆರ್. ವಕೀಲರಿಂದ – 1 ನೇ ಆರೋಪಿ ಪರವಾಗಿಃ- ಇರುವುದಿಲ್ಲ.**

**<u>ಪಾಟೀ ಸವಾಲುಃ</u> ಶ್ರೀ.ಆರ್.ಎಸ್. ವಕೀಲರಿಂದ – 2 ರಿಂದ 4 ನೇ ಆರೋಪಿ ಪರವಾಗಿಃ-**

9. ಯಾವ ಆರೋಪಿಯ ವಶದಿಂದ ಮೊಬೈಲ್‌ನ್ನು ಅಮಾನತು ಪಡಿಸಿಕೊಳ್ಳಲಾಯಿತು ಎಂದು ಅವನ ಹೆಸರು ನನಗೆ ಗೊತ್ತಿಲ್ಲ. ಯಾವ ಯಾವ ಆರೋಪಿಯಿಂದ ರೂ.4,000, ರೂ.3,000 ಮತ್ತು ರೂ.2,000 ವನ್ನು ಅಮಾನತು ಪಡಿಸಿಕೊಂಡರು ಎಂದು ಅವರುಗಳ ಪ್ರತ್ಯೇಕ ಪ್ರತ್ಯೇಕವಾದ ಹೆಸರುಗಳನ್ನು ನನಗೆ ತಿಳಿಸಲು ಆಗದು.

10. ಮುದ್ದೆಮಾಲು 18 ಮತ್ತು 19 ಎರಡು ಮೊಬೈಲ್‌ಗಳು ಯಾವ ಆರೋಪಿಯ ವಶದಲ್ಲಿದ್ದವು ಎಂದು ಆತನ ಹೆಸರನ್ನು ತಿಳಿಸಲು ಆಗುವುದಿಲ್ಲ. ಠಾಣೆಗೆ ಹೋದಾಗ ಇವರೆ ಆರೋಪಿಗಳು ಎಂದು ಪೊಲೀಸರು ತಿಳಿಸಿದ ನಂತರದಲ್ಲಿ ನನಗೆ ಗೊತ್ತಾಗಿದೆ ಎನ್ನುವುದು ಸರಿ.

11. ಈ ದಿವಸ ನನಗೆ ಆರೋಪಿ-2 ರಿಂದ 4 ರವರುಗಳ ಗುರುತನ್ನು ಪತ್ತೆ ಹಚ್ಚಲು ಸಾಧ್ಯ ಇಲ್ಲ. ನಾನು ಮತ್ತು ಪ್ರೇಮಾಳ ಗಂಡ ಗಂಗಾಧರ ಸ್ನೇಹಿತರು. ಆ ಕಾರಣಕ್ಕಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲುಃ ಉಳಿದ ಆರೋಪಿಗಳ ಪರವಾಗಿಃ ಇರುವುದಿಲ್ಲ.**

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.